**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.</u>**

ಸಿ.ಸಿ.ನಂ.56/2013

ಪಿಡಬ್ಲ್ಯೂ -9

ಸಾಕ್ಷಿದಾರನ ಹೆಸರುಃ- ತಮ್ಮಣ್ಣ
ತಂದೆ ಹೆಸರು :- ಲೇಃಚಿಕ್ಕ ಗೌಡಪ್ಪ
ವಯಸ್ಸು :- 61 ವರ್ಷ
ಉದ್ಯೋಗ :- ನಿವೃತ್ತ ಎ ಎಸ್ ಐ
ವಾಸ :- ತುಮಕೂರು

**<u>ಸಾಕ್ಷಿಗೆ ದಿಃ08.04.2026ರಂದು ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ದಿಃ19.07.2019 ರಿಂದ ದಿಃ31.07.2025 ವರೆವಿಗೂ ನಾನು ಹುಲಿಯುರುದುರ್ಗ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ14.02.2025 ರಂದು ಈ ನ್ಯಾಯಾಲಯದಿಂದ ಸಿಸಿ ನಂ.56/2013 ಪ್ರಕರಣದಲ್ಲಿ ಆರೋಪಿ ನಾಗಮ್ಮ ವಯಸ್ಸು 50 ವರ್ಷ, ವಳಗೆರೆ ಪುರ ಗ್ರಾಮ, ಅಮೃತೂರು ಹೋಬಳಿ, ಕುಣಿಗಲ್ ತಾಲ್ಲೂಕು ಇವರ ವಿರುದ್ದ ಉದ್ಘೋಷಣೆ ವಾರೆಂಟನ್ನು ಹೊರಡಿಸಿದ್ದು ಈ ಸಂಬಂಧ ದಿಃ20.02.2025ರಂದು ಆರೋಪಿಯ ವಿಳಾಸಕ್ಕೆ ಹೋಗಿ ವಿಚಾರ ಮಾಡಲಾಗಿ ಆರೋಪಿಯಪತ್ತೆಯ ಬಗ್ಗೆ ಸರಿಯಾದ ಮಾಹಿತಿ ಸಿಕ್ಕಿರುವುದಿಲ್ಲ. ವಳಗೆರೆ ಪುರ ಗ್ರಾಮದ ವಿ.ಆರ್ ಶಾಮಣ್ಣ ಮತ್ತು ವಿಷ್ಣು ಕುಂಚಯ್ಯ ರವರ ಸಮಕ್ಷಮ ಸಂಜೆ 4.00 ರಿಂದ 5.00 ಗಂಟೆಯವರೆಗೆ ಸ್ಥಳದಲ್ಲಿ ಮಹಜರ್ ಕ್ರಮಜರುಗಿಸಿರುತ್ತೇನೆ. ಅದೇ ದಿನ ವಿ.ಆರ್ ಶಾಮಣ್ಣ, ವಿಷ್ಣು ಕುಂಚಯ್ಯ, ಧನರಾಜು, ದಾಸೇಗೌಡ ಮತ್ತು ನಾಗೇಶ್ ರವರುಗಳ ಹೇಳಿಕೆಗಳನ್ನು ಸ್ಥಳದಲ್ಲಿಯೇ ದಾಖಲಿಸಿಕೊಂಡಿರುತ್ತೇನೆ. ದಿಃ13.03.2025ರಂದು ಪಡುಗೆರೆ ಗ್ರಾಮಪಂಚಾಯಿತಿಗೆ ಆರೋಪಿ ನಾಗುಮ್ಮನವರಿಗೆ ಸೇರಿದ ಸ್ಥಿರ ಮತ್ತು ಚರಾಸ್ತಿಗಳ ಮಾಹಿತಿ ಕೇಳಲಾಗಿ ಆರೋಪಿಗೆ ಸೇರಿದ ಯಾವುದೇ ಸ್ಥಿರ ಮತ್ತು ಚರಾಸ್ತಿಗಳು ಇರುವುದಿಲ್ಲ ಎಂದು ಲಿಖಿತವಾಗಿ ವರದಿ ನೀಡಿರುತ್ತಾರೆ. ದಿಃ20.03.2025ರಂದು ಆರೋಪಿಯ ವಿರುದ್ದ ಉದ್ಗೋಷಣಾ ವಾರೆಂಟ್ ಜೊತೆ ಸ್ಥಳಪಂಚನಮೆ, ಗ್ರಾಮಸ್ಥರ ಹೇಳಿಕೆ ಹಾಗೂ ಪಡುವಗೆರೆ ಗ್ರಾಮಪಂಚಾಯಿತಿ ನೀಡಿರುವ ಲಿಖಿತ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿ ಪತ್ತೆಯಾಗದ ಕಾರಣ ಆರೋಪಿಯನ್ನು ದಸ್ತಗಿರಿ ಮಾಡಲು ಆಗಿರುವುದಿಲ್ಲ. ಪಂಚನಾಮೆ, ಗ್ರಾಮಸ್ಥರ ಹೇಳಿಕೆ, ಪಡುವಗೆರೆ ಗ್ರಾಮಪಚಾಯಿತಿಯವರು ನೀಡಿದ ವರದಿಗೆ ನನ್ನ ಸಹಿ ಇರುತ್ತದೆ. ಅವುಗಳನ್ನು ನಿ.ಪಿ.12 ರಿಂದ ನಿ.ಪಿ.14 ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.